ನೀವು ವಾಪಸ್ ಬಂದಿರ್ತೀರಾ.’

‘ಸರಿ, ನಿಮಗೇನೂ ಅಭ್ಯಂತರ ಇಲ್ಲಾ ಅಂದ್ರೆ... ನಿಮ್ಮ ಜೊತೆ ಬರೋದಕ್ಕೆ ನನಗೂ ಖುಷಿನೆ. ಆದ್ರೆ ನೀವು ಮನೆಗೆ ಕರಕೊಂಡು ಹೋಗ್ತೀರಿ ಅನ್ನೋ ನಿರೀಕ್ಷೆ ಮಾಡಿರಲಿಲ್ಲ... ಎಲ್ಲ ಅನಿರೀಕ್ಷಿತ’ ಎಂದು ಹರ್ಷ ವ್ಯಕ್ತಪಡಿಸಿದ.

‘ಹೌದು ಮೋಹನ್ ಎಲ್ಲರ ಜೀವನದಲ್ಲಿ ಕೆಲವು ಘಟನೆಗಳು ಹೀಗೇ ಅನಿರೀಕ್ಷಿತವಾಗಿ ನಡದೋಗ್ತವೆ. ಆದ್ರೆ ಆ ಅನಿರೀಕ್ಷಿತಗಳನ್ನ ಸ್ವೀಕರಿಸೋ ಗುಣ ನಮಗೆ ಇರಬೇಕಾಗ್ತದೆ... ಅಲ್ವಾ?’

